**1 ನೇ ಹೆಚ್ಚುವರಿ ಸತ್ರ ಮತ್ತು ವಿಶೇಷ ನ್ಯಾಯಾಲಯ, ಚಿಕ್ಕಮಗಳೂರು**

**ಸ್ಪೆಷಲ್ ಮೊಕದ್ದಮೆ ನಂಃ 59/2023**

| | | |
|---|---|---|
| ಸಾಕ್ಷಿದಾರರ ಹೆಸರು | - ಹರೀಶ್ | ಪಿಡಬ್ಲ್ಯೂ- 01 |
| ತಂದೆಯ ಹೆಸರು | - ಚಂದಪ್ಪ | ಸಿಡಬ್ಲ್ಯೂ -01 |
| ವಯಸ್ಸು | - 40 ವರ್ಷ | |
| ಉದ್ಯೋಗ | - ಕೂಲಿ ಕೆಲಸ | |
| ವಾಸ ಸ್ಥಳ | - ನಂದಿ ಗ್ರಾಮ | |

ದಿನಾಂಕಃ 05-01-2026 ರಂದು ಸಾಕ್ಷಿಗೆ ಪ್ರಮಾಣ ವಚನವನ್ನು ಬೋಧಿಸಲಾಯಿತು.

ಮುಖ್ಯ ವಿಚಾರಣೆ : ವಿಶೇಷ ಸರ್ಕಾರಿ ಅಭಿಯೋಜಕರಿಂದ-

1. ನ್ಯಾಯಾಲಯದಲ್ಲಿ ಹಾಜರಿರುವ ಆರೋಪಿ ಗೊತ್ತು, ಆತ ನಮ್ಮ ಊರಿನವನು. ಚಾಸಾ.2 ರಿಂದ 5, 7 ಮತ್ತು 8 ರವರು ಗೊತ್ತು,ಅವರು ನಮ್ಮ ಊರಿನವರು. ಚಾಸಾ.6 ನನ್ನ ತಂದೆ. ನಾನು ಪರಿಶಿಷ್ಟ ಜಾತಿಯ ಆದಿಕರ್ನಾಟಕ ಜನಾಂಗಕ್ಕೆ ಸೇರಿದವನು. ಆರೋಪಿ ಲಿಂಗಾಯಿತ ಜನಾಂಗಕ್ಕೆ ಸೇರಿದವನು.

2. ಆರೋಪಿಯಿಂದ ಚಾಸಾ.6 ರವರಿಗೆ ಯಾವುದೇ ತೊಂದರೆ ಆಗಿಲ್ಲ. ಆ ಬಗ್ಗೆ ನಾನು ಆರೋಪಿಯ ವಿರುದ್ಧ ಪೊಲೀಸರಿಗೆ ಯಾವುದೇ ದೂರು ಅಥವಾ ಹೇಳಿಕೆಯನ್ನು ನೀಡಿಲ್ಲ.

**3.** ಸಾಕ್ಷಿಗೆ ಎರಡು ದಾಖಲೆಗಳನ್ನು ತೋರಿಸಲಾಗಿ ಅವುಗಳಲ್ಲಿರುವ ತನ್ನ ಸಹಿಗಳನ್ನು ನೋಡಿ ಗುರುತಿಸಿರುತ್ತಾರೆ. ಸದರಿ ದಾಖಲೆಗಳು ದಿಃ 10-01-2023 ರಂದು ಸಾಕ್ಷಿಯು

ಲಿಂಗದಹಳ್ಳಿ ಪೊಲೀಸರಿಗೆ ನೀಡಿದ್ದಾರೆ ಎಂದು ಹೇಳಲಾದ ದೂರು ಮತ್ತು ಸದರಿ ದೂರಿನ ಮೇರೆಗೆ ಪೊಲೀಸರು ದಾಖಲಿಸಿದ್ದಾರೆ ಎಂದು ಹೇಳಲಾದ ಪ್ರಥಮ ವರ್ತಮಾನ ವರದಿಯಾಗಿದ್ದು ಅವುಗಳನ್ನು ಕ್ರಮವಾಗಿ ನಿಪಿ.1 ಮತ್ತು ನಿಪಿ.2 ಎಂದು, ಅವುಗಳಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ.1(ಎ) ಮತ್ತು ನಿಪಿ.2(ಎ) ಎಂದು ಗುರುತಿಸಲಾಯಿತು. ಈಗ್ಗೆ 2 ವರ್ಷಗಳ ಹಿಂದೆ ಸದರಿ ಸಹಿಗಳನ್ನು ಲಿಂಗದಹಳ್ಳಿ ಪೊಲೀಸ್ ಠಾಣೆಯಲ್ಲಿ ಪೊಲೀಸರು ಹೇಳಿದ ಮೇರೆಗೆ ಮಾಡಿದ್ದೇನೆ. ಆದರೆ ಯಾವ ವಿಚಾರಕ್ಕೆ ಎಂದು ನನಗೆ ಗೊತ್ತಿಲ್ಲ. ಸದರಿ ದಾಖಲೆಗಳಲ್ಲಿರುವ ವಿಚಾರಗಳು ನನಗೆ ಗೊತ್ತಿಲ್ಲ. ಪೊಲೀಸರು ಅದನ್ನು ನನಗೆ ಓದಿ ಹೇಳಿಲ್ಲ.

(ಈ ಹಂತದಲ್ಲಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ ಪಾಟೀ ಸವಾಲು ಮಾಡಲು ಅಭಿಯೋಜಕರು ಅನುಮತಿ ಕೇಳಿರುತ್ತಾರೆ ದಾಖಲೆಗಳನ್ನು ಪರಿಶೀಲಿಸಿ ಅನುಮತಿ ನೀಡಲಾಯಿತು)

<u>ಪಾಟೀ ಸವಾಲುಃ ವಿಶೇಷ ಸರ್ಕಾರಿ ಅಭಿಯೋಜಕರಿಂದಃ-</u>

4. ದಿಃ 08-01-2023 ರಂದು ಎಮ್ಮೆ ಮೇಯಿಸುವ ಚಾಸಾ.4 ಚಂದ್ರಪ್ಪರವರ ಸರದಿ ಇದ್ದು ಅವರ ಪರವಾಗಿ ನನ್ನ ತಂದೆಯಾದ ಚಾಸಾ.6 ರವರು ಎಮ್ಮೆ ಮೇಯಿಸಲು ಸಿದ್ದರ ಓಣಿ ಹತ್ತಿರ ಹೋದಾಗ ಅವರಿಗೆ ಬಾಯಾರಿಕೆ ಆಗಿದ್ದರಿಂದ ಎಮ್ಮೆಗಳನ್ನು ಬಿಟ್ಟು ಮಧ್ಯಾಹ್ನ 12 ಗಂಟೆ ಸುಮಾರಿಗೆ ಮಿಟಲಿ ಮರದಡಿಯಲ್ಲಿ ನೀರು ಕುಡಿಯುತ್ತಿದ್ದಾಗ 1 ನೇ ಆರೋಪಿಯಾದ ಅರುಣಕುಮಾರ ಅಲ್ಲಿಗೆ ಹೋಗಿ ಏಕಾಏಕಿ

ದೊಣ್ಣೆಯಿಂದ ಚಾಸಾ.6 ರವರ ಎಡಗಾಲು, ಎಡಗೈ ಮತ್ತು ಸೊಂಟಕ್ಕೆ ಬಲವಾಗಿ ಹೊಡೆದು ಅವಾಚ್ಯ ಶಬ್ಧಗಳಿಂದ ಬೈದನು ಎಂದರೆ ಸರಿಯಲ್ಲ. ಆತನ ಜೊತೆಗೆ ಹೋಗಿದ್ದ ಹೇಮಂತ್ ಸಹ ನನ್ನ ತಂದೆಯ ಕೈಗೆ ಕಲ್ಲಿನಿಂದ ಹೊಡೆದು ಅವಾಚ್ಯ ಶಬ್ಧಗಳಿಂದ ನಿಂದಿಸಿದನು ಎಂದರೆ ಸರಿಯಲ್ಲ. ಆಗ ಚಾಸಾ.6 ರವರು ಯಾಕಪ್ಪ ಈ ರೀತಿ ಹೊಡೆಯುತ್ತೀರಾ ಎಂದು ಕೇಳಿದಾಗ, ಹೊಲೆಯ ಮಾದಿಗ ಸೂಳೆ ಮಗನೇ, ನಿನ್ನ ತಾಯಿನಾಡ ನಿನಗೆ ಜ್ಞಾನ ಇಲ್ಲವೇನೋ, ನಿನ್ನನ್ನು ಕೊಲೆ ಮಾಡುತ್ತೇನೆ ಮತ್ತು ನಿನ್ನ ಕುಟುಂಬದವರನ್ನು ಯಾರನ್ನು ಕೂಡ ಉಳಿಸುವುದಿಲ್ಲ ಎಂದು ಆರೋಪಿತರು ಹೇಳಿದ್ದಾರೆ ಎಂದರೆ ಸರಿಯಲ್ಲ. ನನ್ನ ಜಮೀನಿನಲ್ಲಿರುವ ಜೋಳದ ಗುಡ್ಡೆಗೆ ಎಮ್ಮೆಗಳನ್ನು ಬಿಟ್ಟಿದ್ದೀಯಾ ಎಂದು ಆರೋಪಿ ಚಾಸಾ.6 ರವರಿಗೆ ಬೈದಿದ್ದಾನೆ ಎಂದರೆ ಸರಿಯಲ್ಲ. ಆಗ ಚಾಸಾ.6 ರವರು ಇಲ್ಲಪ್ಪ ನಿನ್ನ ಜೋಳದ ಗುಡ್ಡೆಗೆ ಎಮ್ಮೆಗಳನ್ನು ಬಿಟ್ಟಿಲ್ಲ ಎಂದು ಹೇಳಿದಾಗಲೂ ಸಹ ಆರೋಪಿ ನನ್ನ ತಂದೆಗೆ ಪುನಃ ಹಲ್ಲೆ ಮಾಡಿ ದೊಣ್ಣೆಯನ್ನು ಮರದಡಿ ಬಿಸಾಡಿ ಬಂದಿದ್ದರು ಎಂದರೆ ಸರಿಯಲ್ಲ.

5. ನಂತರ ನಾನು ಸಂಜೆ 6 ಗಂಟೆಗೆ ಸುಮಾರಿಗೆ ನನ್ನ ಜಮೀನಿನಲ್ಲಿ ಕೆಲಸ ಮುಗಿಸಿಕೊಂಡು ನಮ್ಮ ಬೀದಿಯ ಹತ್ತಿರ ಬಂದಾಗ ನಮ್ಮ ಗ್ರಾಮದ ವಾಸಿಯಾದ ಚಾಸಾ.7 ರೇಖಾರವರು ನನ್ನನ್ನು ಕುರಿತು, ಚಾಸಾ.6 ರವರು ಬೀರೂರು ಚಂದ್ರಣ್ಣ ಜಮೀನಿನಲ್ಲಿರುವ ಮರದಡಿಯಲ್ಲಿ ಬಿದ್ದಿರುವುದಾಗಿ ತಿಳಿಸಿದರು ಎಂದರೆ ಸರಿಯಲ್ಲ. ಆಗ ನಾನು ಮತ್ತು ಚಾಸಾ.8 ರವರು ಬೈಕಿನಲ್ಲಿ ನನ್ನ ತಂದೆಯ ಹತ್ತಿರ ಹೋಗಿ ಯಾಕೆ ಹೀಗೆ

ಮಲಗಿದ್ದೀಯಾ, ಏಕೆ ನಿನ್ನ ಬಟ್ಟೆಯೆಲ್ಲಾ ಈ ರೀತಿ ಹರಿದಿದೆ ಎಂದು ಕೇಳಿದೆವು ಎಂದರೆ ಸರಿಯಲ್ಲ. ಆಗ ಚಾಸಾ.6 ರವರು ನನಗೆ ಆರೋಪಿ ಮತ್ತು ಹೇಮಂತ್ ರವರು ತನಗೆ ಹೊಡೆದು ಹೋಗಿದ್ದಾಗಿ ತಿಳಿಸಿದರು ಎಂದರೆ ಸರಿಯಲ್ಲ. ನಂತರ ನಾನು ನನ್ನ ತಂದೆಯನ್ನು ಬೈಕಿನಲ್ಲಿ ಕೂರಿಸಿಕೊಂಡು ನಮ್ಮ ಮನೆಗೆ ಬಂದೆನು ಎಂದರೆ ಸರಿಯಲ್ಲ.

6. ನಂತರ ಬೆಳಿಗ್ಗೆ ಎದ್ದಾಗ ಚಾಸಾ.6 ರವರು ತುಂಬಾ ನೋವಾಗುತ್ತಿದೆ ಎಂದು ತಿಳಿಸಿದಾಗ ನಾನು ನನ್ನ ಅಣ್ಣನಾದ ಬಸವರಾಜರವರ ಬಳಿ ಹಣವನ್ನು ಪಡೆದುಕೊಂಡು ಚಾಸಾ.6 ರವರನ್ನು ಮಧ್ಯಾಹ್ನ ಸುಮಾರು 12 ಗಂಟೆಗೆ ತರೀಕೆರೆ ಸರ್ಕಾರಿ ಆಸ್ಪತ್ರೆಗೆ ಕರೆದುಕೊಂಡು ಹೋಗಿ ದಾಖಲು ಮಾಡಿ ಚಿಕಿತ್ಸೆ ಕೊಡಿಸಿದೆನು ಎಂದರೆ ಸರಿಯಲ್ಲ. ಆರೋಪಿ ಮತ್ತು ಮೇಲೆ ಹೇಳಿದ ಹೇಮಂತ್ ಚಾಸಾ.6 ರವರಿಗೆ ಹಲ್ಲೆ ಮಾಡಿದ ಪರಿಣಾಮ ಅವರ ಎಡಗೈ ಮತ್ತು ಎಡಗಾಲಿನ ಮೂಳೆ ಮುರಿದು ಹೋಗಿತ್ತು ಎಂದರೆ ಸರಿಯಲ್ಲ. ಲಿಂಗದಹಳ್ಳಿ ಪೊಲೀಸರು ಚಾಸಾ.6 ರವರ ಹೇಳಿಕೆಯನ್ನು ಪಡೆಯಲು ಸದರಿ ಆಸ್ಪತ್ರೆಗೆ ಬಂದಾಗ ಚಾಸಾ.6 ರವರು ಹೇಳಿಕೆ ನೀಡುವ ಸ್ಥಿತಿಯಲ್ಲಿ ಇಲ್ಲದ ಕಾರಣ ನಾನು ಅವರಿಗೆ ಚಿಕಿತ್ಸೆ ಕೊಡಿಸಿ ದಿಃ 10-01-2023 ರಂದು ನಾನು ಲಿಂಗದಹಳ್ಳಿ ಪೊಲೀಸ್ ಠಾಣೆಗೆ ಹೋಗಿ ಆರೋಪಿಯ ವಿರುದ್ಧ ಕ್ರಮ ಜರುಗಿಸುವಂತೆ ನಿಪಿ.1 ರಂತೆ ದೂರು ನೀಡಿದ್ದೇನೆ ಎಂದರೆ ಸರಿಯಲ್ಲ. ಸದರಿ ದೂರಿನ ಮೇರೆಗೆ ಪೊಲೀಸರು ನಿಪಿ.2 ರಂತೆ ಪ್ರಥಮ ವರ್ತಮಾನ ವರದಿಯನ್ನು ದಾಖಲಿಸಿ ಅದರ ಪ್ರತಿಯನ್ನು ನನಗೆ

ನೀಡಿದ್ದಾರೆ ಎಂದರೆ ಸರಿಯಲ್ಲ.

7. ನಂತರ ದಿಃ 13-01-2023 ರಂದು ನಾನು ಪೊಲೀಸರಿಗೆ ಘಟನೆಯ ಬಗ್ಗೆ ವಿವರವಾಗಿ ತಿಳಿಸಿ ಮೇಲೆ ಹೇಳಿದ ಹೇಮಂತ್ ಗಲಾಟೆಯಾಗುವಾಗ ಚಾಸಾ.6 ರವರಿಗೆ ಕಲ್ಲಿನಿಂದ ಹೊಡೆದಿರುವುದಿಲ್ಲ ಮತ್ತು ಜಾತಿ ನಿಂದನೆ ಮಾಡಿರುವುದಿಲ್ಲ ಎಂದು ತಿಳಿಸಿ ಮರು ಹೇಳಿಕೆಯನ್ನು ನೀಡಿದ್ದೇನೆ ಎಂದರೆ ಸರಿಯಲ್ಲ. ಸಾಕ್ಷಿಯ ಸದರಿ ಹೇಳಿಕೆಯನ್ನು ನಿಪಿ.3 ಎಂದು ಗುರುತಿಸಲಾಯಿತು.

**8.** ಆರೋಪಿ ನಿಮ್ಮ ತಂದೆಯ ಮೇಲೆ ಹಲ್ಲೆ ಮಾಡಿ ನಿಮ್ಮ ಜಾತಿಯನ್ನು ನಿಂದಿಸಿದ್ದರೂ ಸಹ ನೀವು ಈಗ ಆತನೊಂದಿಗೆ ರಾಜಿ ಮಾಡಿಕೊಂಡು ಆತನಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ್ಯಹೇಳುತ್ತಿದ್ದೀರಿ ಎಂದರೆ ಸರಿಯಲ್ಲ.

ಪಾಟೀ ಸವಾಲು: ಆರೋಪಿಯ ಪರ ವಕೀಲರು ಸಾಕ್ಷಿಯ ಪಾಟೀ ಸವಾಲು ಇಲ್ಲವೆಂದು ನುಡಿದಿರುತ್ತಾರೆ.

(ನನ್ನ ಉಕ್ತಲೇಖನಕ್ಕೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸ.ಇ.ಎ.ಒ.

ಸಹಿ/-
(ಭಾನುಮತಿ ಬಿ.ಸಿ)
1 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಚಿಕ್ಕಮಗಳೂರು.

ಸಾಕ್ಷಿಯ ಸಹಿ